**OS 27-2020**
**PW-2**

ದಿನಾಂಕ:02.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲು : **1** ರಿಂದ **5 , 7, 8, 15** ರಿಂದ **17** ಮತ್ತು **19**ನೇ ವಾದಿ ಪರ ಶ್ರೀ ಎಂ ಆರ್ ವಕೀಲರಿಂದಃ</u>

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ**.** ಈಗ ವ್ಯವಸಾಯ ಮಾಡುತ್ತಿದ್ದೇನೆ**.** ವಾದಿ ಕಟ್ಟಡವನ್ನು ನಾನು ಬಾಡಿಗೆ ಗೆ ತೆಗೆದುಕೊಂಡು ಟೀ ಅಂಗಡಿ ನಡೆಸುತ್ತಿದ್ದೇನೆ**.** ದಾವಾ ಸ್ವತ್ತಿನ ವ್ಯಾಪರ ಸತೀಶ್ ರವರ ಮನೆಯಲ್ಲಿ ನಡೆದಿರುತ್ತದೆ**.** ಆಗ ಸಮಯ ಬೆಳಿಗ್ಗೆ 10.30 ರಿಂದ 11.00 ಗಂಟೆ ಆಗಿತ್ತು. ಆಗ ಅವರ ಕುಟುಂಬದವರು ತುಂಬಾ ಜನ ಸೇರಿದ್ದರು. ಅವರ ಹೆಸರುಗಳು ಜಯಲಕ್ಷಮ್ಮ, ಸಿದ್ದಪ್ಪ, ಸತೀಶ್, ನಾಗರಾಜು, ರಾಜಶೇಖರ್, ಸುನೀತ, ಉಮೇಶ ಮತ್ತು ಲಕ್ಷ್ಮಮ್ಮ ಇದ್ದರು. ಪತ್ರ ಬರೆಯಲು ಪೇಪರ್ ನ್ನು ಯಾರು ತಂದರು ಗೊತ್ತಿಲ್ಲ. ರುದ್ರಮ್ಮ ನನಗೆ ಗೊತ್ತು. ಪತ್ರ ಬರೆದಾಗ ಅವರು ಇರಲಿಲ್ಲ. Stamp Paper ನೋಡಿದ್ದೇನೆ ಅದು 500/- ರೂ ಕಾಗದ ಆಗಿರುತ್ತದೆ. ದಿ 25.11.2015 ರಲ್ಲಿ ವ್ಯಾಪಾರ ನಡೆದಿರುತ್ತದೆ. ಸುಮಾರು 2 ಗಂಟೆ ಕಾಲ ಮಾತುಕತೆ ನಡೆದಿರುತ್ತದೆ. ಆ ಪತ್ರವನ್ನು ರವಿಶಂಕರ್ ರವರು ಪತ್ರವನ್ನು ಬೆರಳಚ್ಚು ಮಾಡಿಕೊಂಡು ರಿಜಿಸ್ಟರ್ ಆಫೀಸ್ ಗೆ ಬಂದಿದ್ದರು. ಆಗ ಸಮಯ 12.00 ಗಂಟೆ ಯಿಂದ 12.30 ಆಗಿತ್ತು. ಉಪನೋಂದಾಣಿ ಕಚೇರಿಯಲ್ಲಿ ಕ್ರಯ ಬರೆದುಕೊಟ್ಟು ಸಹಿ ಮಾಡಿರುತ್ತಾರೆ. ಆ ಪತ್ರಕ್ಕೆ ಸುಮಾರು 25 ಜನ ಸಹಿ ಮಾಡಿದ್ದಾರೆ. 25 ಜನ ಸಹಿ ಮತ್ತು ಹೆಬ್ಬುಟ್ಟಿನ ಗುರುತುಗಳನ್ನು ಕೇವಲರದ್ದನ್ನು ಮಾತ್ರ ಗುರುತಿಸಬಹುದು.

2. ವಾದಿಯು 7 ಲಕ್ಷ ಚೆಕ್ ನ್ನು 46 ಲಕ್ಷ ನಗದು ಹಣವನ್ನು ಸತೀಶ್ ರವರಿಗೆ ಕೊಟ್ಟಿರುತ್ತಾರೆ. ಚೆಕ್ ಖಾಲಿ ಚೆಕ್ಕು 7 ಲಕ್ಷ ಎಂದು ಬರೆದಿತ್ತು. ಪಹಣಿ ಪತ್ರಿಕೆ ನೋಡಿರುವುದಿಲ್ಲ. ಯಾರ ಹೆಸರಿನಲ್ಲಿ ಪಹಣಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಪ್ರತಿವಾದಿಯವರು ಸಹಿ ಮಾಡಿಲ್ಲ ಮತ್ತು ಹೆಬ್ಬೆಟ್ಟು ಗುರುತು ಹಾಕಿಲ್ಲ ಎಂದರೇ ಸರಿಯಲ್ಲ. ಆ ಸಮಯದಲ್ಲಿ ನಾನು ಇರಲಿಲ್ಲ ಎಂದರೇ ಸರಿಯಲ್ಲ. ವಾದಿಯ ಮಾತನ್ನು ಕೇಳಿ ಬೇರೆ ದಿನ ಸಹಿ ಮಾಡಿದ್ದೇನೆ ಎಂದರೇ ಸರಿಯಲ್ಲ. ಸಿವಿಲ್ ದಾವೆಯನ್ನು ಯಾರ ಯಾರ ಮೇಲೆ ಹಾಕಿದ್ದಾರೆ ಎಂದರೇ ಗೊತ್ತಿಲ್ಲ. ಆದರೆ ಸುನೀಲ್ ರವರು ಹಾಕಿದ್ದರು. ಹಾಕಿದ ಕೇಸ್ ಏನಾಯಿತು ಎಂದರೇ ಸಾಕ್ಷಿ ದಿ 06.02.2019 ರಲ್ಲಿ ತೀರ್ಮಾನ ಆಗಿರುತ್ತದೆ. ಸರ್ವೆ ನಂ 224/2 ಕ್ಕೆ ಸಂಬಂದ ಪಟ್ಟಂತೆ ವಾದಿ ಕೆಲವರು ಪ್ರತಿವಾದಿಯವರಿಂದ ಕ್ರಯಪತ್ರವನ್ನು ಯಾವಾಗ ಬರೆಸಿಕೊಂಡರು ಎಂದರೇ ಸಾಕ್ಷಿ ದಿ 06.02.2019 ಎಂದು ಹೇಳುತ್ತಾರೆ. ಆ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಸಾಕ್ಷಿಗೆ ದಿ 06.02.2019 ರ ಆನ್ ಲೈನ್ ದೃಢೀಕೃತ ಕ್ರಯ ಪತ್ರವನ್ನು ತೋರಿಸಿ ತಮ್ಮ ಸಹಿ ಇದೆಯಾ ಎಂದು ಕೇಳಿ ಸಾಕ್ಷಿ ಸದರಿ ಪತ್ರವನ್ನು ನೋಡಿ ಇಲ್ಲ ಎಂದು ಉತ್ತರಿಸಿರುತ್ತಾರೆ.

3. ಸುನೀಲ್ ಕುಮಾರ್ ರವರ ತಂಗಿ ಶೃತಿರವರನ್ನು ವಾದಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೇ ಹೌದು. ದಾವೆ ಸ್ವತ್ತಿನ ಸಂಬಂದ ಪಟ್ಟಂತೆ ಉಳಿಕೆ ಹಣವನ್ನು ಕೊಡಲು ಆಗಾದ ಕಾರಣ ದಿ 06.02.2019 ರ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೇ ಇಲ್ಲ. ಕೆಲವರಿಗೆ ಕ್ರಯ ಪತ್ರವನ್ನು ಬರೆದುಕೊಡುವ ಅಧಿಕಾರ ಇರಲಿಲ್ಲ ಎಂದರೇ ಹೌದು. ನಿಪಿ-2 ರ ಪತ್ರವನ್ನು ಯಾರು ತಂದಿದ್ದರು ಎಂದರೇ ಗೊತ್ತಿಲ್ಲ. ಆದರೆ ದಿ 02.04.2019 ರಲ್ಲಿ ತಂದಿರುತ್ತಾರೆ. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಅದೆ ಎಂದು ಕೇಳಲಾಗಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಪತ್ರ ದಿ 15.04.2019 ಆಗಿರುತ್ತದೆ. ನಿಪಿ-2 ಕ್ಕೆ ಯಾರು ಯಾರ ಸಹಿ ಮಾಡಿದ್ದಾರೆ ಎಂದರೇ ಸಿದ್ದಪ್ಪ,

ವಿನುತ, ನಾಗರಾಜು, ಜಯಮ್ಮ, ಸತೀಶ, ರಾಜಶೇಖರ ರವರು ಸಹಿ ಮಾಡಿದ್ದಾರೆ. ನಿಪಿ-1ಕ್ಕೆ ಸಹಿ ಮಾಡುವ ಎಲ್ಲಾ ಪಕ್ಷಗಾರರು ನಿಪಿ-2 ಕ್ಕೆ ಸಹಿ ಮಾಡಿಲ್ಲ ಎಂದರೇ ಗೊತ್ತಿಲ್ಲ. ದಾವೆ ಯಾವಾಗ ಮುಕ್ತಾಯ ಆಗಿದೆ ಎಂದು ನಿಪಿ-2 ರಲ್ಲಿ ಬರೆದಿದ್ದಾರೆ ಎಂದರೇ ಗೊತ್ತಿಲ್ಲ. 4.50 ಲಕ್ಷ ರೂಗಳನ್ನು ಸಿದ್ದಪ್ಪ ಎನ್ನುವವರ ಕೈಗೆ ಕೊಟ್ಟಿರುತ್ತಾರೆ. ನಿಪಿ-2 ನ್ನು ಯಾವ ಸಮಯದಲ್ಲಿ ಬರೆದಿದ್ದಾರೆ ಎಂದರೆ ಬೆಳಿಗ್ಗೆ 11.00 ರಿಂದ 11.30 ಅವಧಿಯಲ್ಲಿ ರವಿ ಶಂಕರ್ ಬರೆದಿದ್ದಾರೆ. ನಿಪಿ-2 ನ್ನು ನಾವು ಮತ್ತು ವಾದಿ ಸಾಮೀಲಾಗಿ ಸೃಷ್ಟಿ ಮಾಡಿದ್ದೇವೆ ಎಂದರೇ ಸರಿಯಲ್ಲ.

4. ನಿಪಿ-1ಕ್ಕೆ ನಿಖರವಾಗಿ ಎಷ್ಟು ಜನ ಸಹಿ ಮಾಡಿದ್ದಾರೆ ಎಂದರೇ 20 ಜನ ಮಾಡಿದ್ದಾರೆ. ಪತ್ರದಲ್ಲಿ ತೋರಿಸಿರುವ ಸಂಖ್ಯೆಗಳು ಎಷ್ಟು ಎಂದರೇ 20 ಜನ ತೋರಿಸಿದ್ದಾರೆ. ನಿಪಿ-2 ರಲ್ಲಿ ನಿಖರವಾಗಿ ಎಷ್ಟು ಜನ ಸಹಿ ಮಾಡಿದ್ದಾರೆ ಎಂದರೇ 12 ಜನ ಮಾಡಿದ್ದಾರೆ. ನಿಪಿ-2 ನ್ನು ವಾದಿ ಸರಿಯಾದ ಸಮಯದಲ್ಲಿ ಬರೆಸಿಕೊಂಡಿಲ್ಲ ಎಂದರೇ ಸುಳ್ಳು. ವಾದಿಯು Real Estate ಮಾಡುತ್ತಾರೆ. ವಾದಿ ಇದೇ ತರ ಪತ್ರವನ್ನು ಬರೆಸಿಕೊಂಡು ಮಾರುಕಟ್ಟೆ ಬೆಲೆ ಜಾಸ್ತಿ ಆಗಿದೆ ಎಂದು ಆಗೇ ಬಿಟ್ಟುರುತ್ತಾರೆ ಎಂದರೇ ಸುಳ್ಳು. ಇದೇ ನ್ಯಾಯಾಲಯದಲ್ಲಿ ಇದೇ ತರ ಕೇಸ್ ಗಳನ್ನು ಹಾಕಿದ್ದಾರೆ ಎಂದರೇ ಸುಳ್ಳು. ನಿಪಿ-1ನ್ನು ಸರಿಯಾದ ಸಮಯಕ್ಕೆ ಬರೆಸಿಕೊಳ್ಳದ ಕಾರಣ ನಿಪಿ-2 ನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ನಿಪಿ-1 ಮತ್ತು 2 ಕ್ಕೆ ಯಾವ ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೇ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)**

**(ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**